ಮಾಡಿಬಿಡುವ ಕೈಗುಣ ಆಕೆಯದು! ಅಹಲ್ಯಾಬಾಯಿಯವರಿಗಂತೂ ಅಡಿಗೆ ಗೊತ್ತಿಲ್ಲ ಅಂತಲ್ಲ – ಗೊತ್ತಿತ್ತು – ಆದರೆ ಒಂದು ತರಹಾ ಪಾಲುಮಾರಿಕೆ. ಹಾಗಾಗಿ ರಾಯರು ಎಂಟೂವರೆಗೆ ಕೆಲಸಕ್ಕೆ ಹೋಗಕ್ಕೆ ಅಂತ ರೆಡಿಯಾಗ್ತಾ ಇದ್ದಹಾಗೆ ಅಹಲ್ಯಬಾಯಿ ಅಡಿಗೆ ಮನೆಯಿಂದಲೇ ಕಿರುಚಿಕೊಂಡರೆ ರಾಯರಿಗೆ ಗೊತ್ತು, ಏನೋ ಇಲ್ಲ ಮನೇಲೀ, ತಾವು ಅಂಗಡಿಗೆ ಸೈಕಲಲ್ಲಿ ಓಡಿ ಹೋಗಿ ಏನನ್ನೋ ತರಬೇಕಾಗತ್ತೇ ಅಂತ. ಹೀಗಾಗಿ ಕಡೆ ಕಡೆಯಲ್ಲಿ ಶ್ರೀನಿವಾಸರಾಯರು ಉಸ್ಸೈನ್ ಬೋಲ್ಟ್ ತರಹ ಯಾವಾಗಲೂ ಕಡೇಗಳಿಗೇಲಿ ಅಂಗಡಿಗೆ ಹೋಗಲು ತಯಾರಾಗೇ ಇರುವರು.

ಇದರ ಮಧ್ಯೆ ಅಹಲ್ಯ ಅವರ ಮತ್ತೊಂದು ಚೇಷ್ಟೆ ಪ್ರಾರಂಭವಾಯಿತು. ಅದೇನೆಂದರೆ ಏನು ಪದಾರ್ಥ ಸಿಕ್ಕಿದರೂ ಅದನ್ನ ಮೊದಲು ವಾಸನೆ ನೋಡುವುದು. ಮೊದಮೊದಲು ಅಹಲ್ಯಬಾಯಿ ಇದನ್ನ ಯಾರಿಗೂ ಕಾಣಿಸದಂತೆ ಮಾಡುತ್ತಿದ್ದರಾದರೂ ಕಡೆಕಡೆಗೆ ಯಾರಿರಲಿ, ಇಲ್ಲದಿರಲಿ, ಅದನ್ನ ವಾಸನೆ ನೋಡುವರು. ರಾಯರಿಗೆ ಇದು ವಿಚಿತ್ರವೆನಿಸಿ 'ಲೇ, ಹಾಗೆಲ್ಲ ಮಾಡಬಾರದು ಕಣೇ, ನೋಡಿದವರು ಏನು ಅನ್ನೋತಾರೆ' ಅಂದರೆ ಆಕೆ 'ಅಂದುಕೊಳ್ಲಿ ಬಿಡಿ, ನಮಗೇನು' ಎಂದು ರಾಯರ ಮೇಲೆ ಹರಿಹಾಯುವುದು ನಡೆದೇ ಇತ್ತು. ಇದರ ಜೊತೆಗೆ ಅವರು ಯಾವ ವಾಕ್ಯ ಉಪಯೋಗಿಸಿದರೂ ಅದನ್ನ ಮುಗಿಸುತ್ತಿದ್ದುದು 'ಲೂ, ಲೂ, ಲೂ' ಎಂದೇ. ಇದೇನು ಇವಳು, ಮಾತೆತ್ತಿದರೆ ಈಗಲೂ ಹಾಗೇ 'ಲೂ, ಲೂ, ಲೂ' ಅಂತಾಳಲ್ಲ ಅಂತ ರಾಯರಿಗೆ ಮತ್ತೊಂದು ಚಿಂತೆ ಅಂಟಿಕೊಂಡಿತು.

ಅಹಲ್ಯಬಾಯಿಯವರ ಅಡಿಗೆಯೇ ಹೊಸ ರೀತಿಯ ಪ್ಯಾಟರ್ನುಗಳನ್ನೂ ಛಾಲೆಂಜುಗಳನ್ನು ರಾಯರ ಮುಂದೆ ತಂದಿಟ್ಟಿತು. ಇದರಿಂದ ಆಖೈರು ರಿಸಲ್ಟು ಅಂದರೆ ರಾಯರೇ ಅಡಿಗೆ ಮನೆಯ ಪೂರ್ತಿ ಜವಾಬ್ದಾರಿ ವಹಿಸಿಕೊಳ್ಳಬೇಕಾಯಿತು. ಬೆಳಗ್ಗೆ ಕಾಫಿಯ ಜವಾಬ್ದಾರಿ ರಾಯರದ್ದೇ ಆಗಿದ್ದರೂ ಅವರು ತಿಂಡಿಯ ಜವಾಬ್ದಾರಿ ವಹಿಸಿಕೊಂಡಿದ್ದು ಹೀಗೇ! ಆಗಾಗ್ಗೆ ಅಹಲ್ಯ ಇವತ್ತು ನಾನು ಇಡ್ಲಿ ಮಾಡ್ತೀನಿ, ಇವತ್ತು ಉಪ್ಪಿಟ್ಟೂ ಅಂತೆಲ್ಲ ಅನೌನ್ಸ್ ಮಾಡಿಬಿಡುವರು. ಒಮ್ಮೆ ಹೀಗೇ ಇಡ್ಲಿ ಮಾಡಿದ ದಿನ ರಾಯರಿಗೆ ಇಡ್ಲಿ ತಂದುಕೊಟ್ಟು ಅವರು ತಿನ್ನುತಾರೆಯೇ ಅನ್ನೋದನ್ನ ಕನ್‌ಫರ್ಮ್ ಮಾಡಿಕೊಳ್ಳಲು ಆಕೆ ಅಲ್ಲೇ ನಿಂತಿದ್ದು ರಾಯರಿಗೆ ಹೇಳಲಾಗದ ಕಷ್ಟ ಆವರಿಸಿಕೊಂಡಿತು. ತಿಂದ ತಕ್ಷಣ ಆಕೆ ಹೇಗಿದೆ? ಅಂತ ಕೇಳಿದ್ದಕ್ಕೆ ಆ ಕಲ್ಲಿಗಿಂತಲೂ ಗಟ್ಟಿಯಾಗಿದ್ದ ಇಡ್ಲಿಯ ಚೂರು ಗಂಟಲಲ್ಲಿ ಸಿಕ್ಕಿಹಾಕಿಕೊಂಡು ರಾಯರು ಅದನ್ನು ನುಂಗಲೂ ಆಗದೆ ಹೊರಗಡೆ ಬರಿಸಲೂ ಆಗದೆ ತ್ರಿಶಂಕು ಸ್ವರ್ಗಕ್ಕೆ ಹೋಗಿ, ಆ ಚೂರು ರಾಯರ ಮೆಟರೆ ಹಿಸುಕಿದಂತಾಗಿ, ಉಸಿರು ಸಿಕ್ಕಿಹಾಕಿಕೊಂಡು, ಕಣ್ಣೆರಡೂ ಮೇಲೆ ಹೋಗಿ ಸಿಕ್ಕಿಕೊಂಡು ಶ್ರೀನಿವಾಸರಾಯರಿಗೆ ಯಮದೂತರು ಅವರ ಪಾಪವನ್ನ ಇಡ್ಲಿಯಲ್ಲಿ ಅವಿತಿಟ್ಟು ಕಳಿಸಿರಬೇಕು ಅನ್ನಿಸಿತು. ಅವತ್ತು ಪುಣ್ಯಕ್ಕೆ ಶ್ರೀನಿವಾಸರಾಯರ ತಮ್ಮ ಪದ್ಮನಾಭ ಆ ಗಳಿಗೆಗೆ ಮನೆಗೆ ಬಂದಿದ್ದರಿಂದ ರಾಯರ ಜೀವ ಉಳಿಯಿತು. ಆತ ಆ ಬೀದಿಗೆ ಯಾವುದೋ ಕಾರಣಕ್ಕೆ ಬಂದಿದ್ದು ಅಣ್ಣ ಹೇಗಿದಾರೆ ಅಂತ ನೋಡೋಕೆ ಬಂದರೆ ಹಾಲಿನಲ್ಲಿ ಈ ಸೀನು. ತಕ್ಷಣ ಆತನ ಫಸ್ಟ್‌ಏಯ್ಡ್ ಟ್ರೀಟ್‌ಮೆಂಟಿನ ಟ್ರೈನಿಂಗು ಕಾರ್ಯಗತವಾಗಿ, ಆತ ರಾಯರ ಹತ್ತಿರ ಧಾವಿಸಿ ಅವರ ತಲೆ ಬಾಗಿಸಿ ಹೆಕ್ಕತ್ತಿನ ಮೇಲೆ ಬಲವಾಗಿ ಹೊಡೆದಿದ್ದರಿಂದ ಆ ಇಡ್ಲಿಯ ಚೂರು ರಾಯರ ಗಂಟಲಿನಿಂದ ಹೊರ ಬಿದ್ದು ಒಳ್ಳೇ ಮಿಸೈಲ್ ತರಹ ಹಾರಿ ಎದುರು ಇದ್ದ ಗೋಡೆಗೆ ಹೊಡೆದು ಉರುಳಿತು. ರಾಯರು ಈ ಇಡ್ಲಿಯ ಅವಾಂತರದಿಂದ ಸೇವ್ ಆಗಿದ್ದಕ್ಕೆ